

ಕರ್ನಾಟಕದ ಸರ್ವೇ ಬಿಂದುಗಳು1870

ರೈಲು, ಶಿಕ್ಷಣ, ಫೋನು ಮುಂತಾಗಿ. ಇಂಥ ಪ್ರಲೋಭನೆ ಇಲ್ಲದ ಒಂದು ಕೆಲಸ ಎಂದರೆ 'ಸರ್ವೇ ಆಫ್ ಇಂಡಿಯಾ' ಸ್ಥಾಪಿಸಿದ್ದು – 1767ರಲ್ಲಿ. ಈಗ ಭಾರತದಲ್ಲಿರುವ ಅತ್ಯಂತ ಹಳೆಯ ಸಂಸ್ಥೆ ಇದು ಎಂಬ ಬಿರುದು ಇದಕ್ಕಿದೆ. ಈ ಸರ್ವೇ ಆಫ್ ಇಂಡಿಯಾ ಮಾಡಿದ ಅಭೂತಪೂರ್ವ ಕೆಲಸವೆಂದರೆ ಇತ್ತ ಕನ್ಯಾಕುಮಾರಿಯಿಂದ ಹಿಡಿದು, ಅತ್ತ ಹಿಮಾಲಯದ ಪರ್ವತಮಾಲೆಗಳವರೆಗೆ ಇರುವ ಲಕ್ಷಣಗಳನ್ನು ವ್ಯವಸ್ಥಿತವಾಗಿ ನಕ್ಷೆಯಲ್ಲಿ ಮೂಡಿಸುವುದು. ಇದೇನೂ ಸುಲಭದ ಕೆಲಸವಾಗಿರಲಿಲ್ಲ. 1802ರಲ್ಲಿ ಪ್ರಾರಂಭಿಸಿದಾಗ ಇದು ಐದು ವರ್ಷಕ್ಕೆ ಮುಗಿಯುತ್ತದೆ ಎಂಬ ಲೆಕ್ಕಾಚಾರವಿತ್ತು. ಆದರೆ ಆದದ್ದೇ ಬೇರೆ. 69 ವರ್ಷ ತೆಗೆದುಕೊಂಡಿತ್ತು. ಅದು ಮುಗಿದದ್ದು 1871ರಲ್ಲಿ. ಎವರೆಸ್ಟ್, ಕೆ2, ಕಾಂಚನಜುಂಗ ಪರ್ವತ ಶಿಖರಗಳ ಎತ್ತರವನ್ನು ಅಳತೆಮಾಡಿದ್ದೇ ಈ ಮಹಾ ಯೋಜಣೆಯಿಂದ. ಅಳತೆ ಮಾಡುವುದೆಂದರೆ ಎಲ್ಲ ಬೆಟ್ಟ ಗುಡ್ಡಗಳನ್ನು ಹತ್ತಿ, ಇಳಿಯುವುದೆಂದಲ್ಲ. ಇಡೀ ದೇಶವನ್ನು ತ್ರಿಭುಜ ರೂಪದಲ್ಲಿ ವಿಭಜಿಸಿ, ಆಧಾರರೇಖೆ ಬಳಸಿ, ಥಿಯೋಡಲೈಟ್ ಎಂಬ ಉಪಕರಣದಿಂದ ಅಜ್ಞಾತ ಭಾಗದ ಎತ್ತರ ಎಷ್ಟಿದೆ ಎಂದು ಅಳೆಯುವುದು. ಇಲ್ಲಿ ಲಂಬ ಕೋನ ಮತ್ತು ಕ್ಷಿತಿಜೀಯ ಕೋನ ಎರಡನ್ನೂ ಅಳೆಯಲಾಗುತ್ತದೆ.

ಎವರೆಸ್ಟ್ ಶಿಖರವು ಪತ್ತೆಯಾದದ್ದು ಹೀಗೆಯೇ. ಬಿಹಾರದ ಮೈದಾನದಿಂದ 176 ಕಿಲೋ ಮೀಟರ್ ದೂರದಲ್ಲಿ ಆಧಾರರೇಖೆ ಎಳೆದು ಅಲ್ಲಿ ಆರರಿಂದ ಹತ್ತು ಮೀಟರ್ ವೀಕ್ಷಣಾ ಗೋಪುರಗಳನ್ನು



ಫಲಕಗಳ ಘರ್ಷಣೆ

ನಿರ್ಮಿಸಿಕೊಂಡು ಥಿಯೋಡಲೈಟ್ ಉಪಕರಣ ಬಳಸಿ ಹಿಮಾಲಯದ ಶೃಂಗಗಳ ಎತ್ತರವನ್ನು ಅಳೆಯುತ್ತ ಹೋದರು. ಒಂದೊಂದು ಶೃಂಗಕ್ಕೂ ಸಂಕೇತಾಕ್ಷರಗಳನ್ನು ಕೊಡುತ್ತಿದ್ದರು. ಅಲ್ಲಿ ಒಂದು ಶಿಖರಕ್ಕೆ ಮೊದಲು H ಎಂಬ ಸಂಕೇತ ಕೊಟ್ಟು ಮುಂದೆ ಅದನ್ನು XV ಎಂದು ಬದಲಾಯಿಸಿದರು. ಬಿಹಾರದ ಮೈದಾನದಿಂದ ಆಧಾರರೇಖೆಯನ್ನು ಉತ್ತರ ಪ್ರದೇಶದ ಎಂಟು ಜಾಗಗಳಿಗೆ ವಿಸ್ತರಿಸಿಕೊಂಡು ಆ ಶಿಖರವನ್ನು ಅಳೆಯಲಾಯಿತು. ಆಗಲೂ ಅದು ಜಗತ್ತಿನ ಅತಿ ಎತ್ತರ ಶಿಖರ ಎಂದು ತಿಳಿದಿರಲಿಲ್ಲ. ರಾಶಿ ರಾಶಿ ದತ್ತಾಂಶವನ್ನು ಅತ್ಯಂತ ಎಚ್ಚರಿಕೆಯಿಂದ ವಿಶ್ಲೇಷಿಸಬೇಕು, ಮತ್ತೆ ಮತ್ತೆ ತಾಳೆಹಾಕಬೇಕು. ಆ ಹೊತ್ತಿಗೆ ಕಾಂಚನಜುಂಗ ಶಿಖರವೇ ಇಡೀ ಹಿಮಾಲಯದಲ್ಲಿ ಅತಿ ಎತ್ತರದ ಶಿಖರ ಎಂದು ಖ್ಯಾತಿಯಾಗಿತ್ತು. ಅದನ್ನೂ ಕೂಡ ಯಾರೂ ಹತ್ತಿರಲಿಲ್ಲ. ಆದರೆ ಅದರ ನೋಟ ಹಾಗಿತ್ತು. 1952ರಲ್ಲಿ ಡೆಹರಾಡೂನಿನ 'ಸರ್ವೇ ಆಫ್ ಇಂಡಿಯಾ'ದ ಕೇಂದ್ರ ಕಚೇರಿಯಲ್ಲಿ ಇದನ್ನು ವಿಶ್ಲೇಷಿಸಲಾಗುತ್ತಿತ್ತು. ಅಲ್ಲಿ ಮಾಹಿತಿಯನ್ನು


ತ್ರಿಕೋನ ವಿಧಾನದಲ್ಲಿ ಪರ್ವತದ ಎತ್ತರದ ಅಳತೆ

